ನೋಡಲು ಸಿಕ್ಕರೂ ನಿದ್ದೆ ಭಾರಿಸುತ್ತಾ ಮಂಪರಿನ ಸ್ಥಿತಿಯಲ್ಲಿ ತೂಕಡಿಸುತ್ತಾ ಕೂತಿರುತ್ತವೆ.

ಗೂಬೆ ತೋರಿಸಲು ಬಂದ ನ್ಯಾಚುರಲಿಸ್ಟ್ ತಾನು ಇಂಡಿಯಾದಲ್ಲೇ ಅತ್ಯಂತ ಶ್ರೇಷ್ಠ ಗೂಬೆ ತಜ್ಞನೆಂದು ಕೊಚ್ಚಿಕೊಂಡ. ತಾನು ಅಷ್ಟು ಸುಲಭಕ್ಕೆ ಯಾರಿಗೂ ಸಿಗುವ ವ್ಯಕ್ತಿ ಅಲ್ಲವೆಂದೂ ಈ ದಿನ ನಿಮಗೆ ತಾನು ಸಿಕ್ಕಿರುವುದೇ ನಿಮ್ಮ ಪೂರ್ವ ಜನ್ಮದ ಪುಣ್ಯವೆಂದು ಆತ ನಿಸ್ಸಂಕೋಚವಾಗಿ ತನ್ನ ತುತ್ತೂರಿ ಊದಿಕೊಂಡ. ನಾವು ಪರಸ್ಪರ ಪುಸುಕ್ಕೆಂದು ನಗೆಯಾಡಿಕೊಂಡಿದ್ದು ಅವನು ಗಮನಿಸಲಿಲ್ಲ ಎಂದು ಕಾಣುತ್ತದೆ. ಭಾರತದ ಅನೇಕ ಪಕ್ಷಿ ತೋರುಗ ತಜ್ಞರಿಗೆ ಇಂತದ್ದೊಂದು ಒಣ ಧಿಮಾಕಿನ ರೋಗವಿದೆ. ಅವರು ಕಷ್ಟಪಟ್ಟು ಈ ವಿದ್ಯೆಯನ್ನು ಕಲಿತಿರುವುದು ನಿಜವಾದರೂ ಫೋಟೊಗ್ರಫಿ ಅರಸಿ ಬಂದ ನಮ್ಮಂತಹ ಪ್ರವಾಸಿಗರನ್ನು ಗುಗ್ಗುಗಳು ಎಂಬಂತೆ ಕಾಣುತ್ತಾರೆ. ಇವರ ಅಹಂಭಾವವನ್ನು ನಾವು ಹೆಚ್ಚು ಚರ್ಚೆ ಬೆಳೆಸಿ ಘಾಸಿಗೊಳಿಸಲು ಹೋಗುವುದಿಲ್ಲ. ನಮಗೆಷ್ಟೇ ತಿಳಿದಿದ್ದರೂ ದಡ್ಡರಂತೆ ಇದ್ದು ಬಿಡುತ್ತೇವೆ. ಆಯ್ತಪ್ಪ ನೀನೇ ದೊಡ್ಡವನು, ನಿನ್ನ ಕುದುರೆಯೇ ಮುಂದೆ ಹೋಗಲಿ ಎಂದು ಮೌನವಾಗಿರುತ್ತೇವೆ. ಅವರ ಜೊತೆ ಹಟಕ್ಕೆ ಬಿದ್ದು ಮಾತಿಗೆ ಮಾತು ಬೆಳೆಸಿ ಆಗಿರುವ ಉಪಕಾರಕ್ಕಿಂತ ಅಸಹಕಾರವೇ ಹೆಚ್ಚು. ಆತ ನಮಗೆ ಕತ್ತಲ ದಾರಿಯಲ್ಲಿ ಮಾತಾಡಬೇಡಿ; ಮೌನವಾಗಿರಿ ಎಂದು ಕಟ್ಟುನಿಟ್ಟಿನ ಪಾಠ ಮಾಡಿ ತಾನು ಮಾತ್ರ ತನ್ನ ಬಿಚ್ಚಿದ ಹರಕು ಬಾಯನ್ನು ಮುಚ್ಚಲೇ ಇಲ್ಲ. ನಾವು ಕಾಣಲು ಹೊರಟ ಗೂಬೆಗಿಂತ ಈ ಗೂಬೆಯ ಕಿರುಕುಳವೇ ಹೆಚ್ಚು ಅನಾಹುತವಾಗಿ ಕಾಣತೊಡಗಿತು.

ನಾವು ಕಾಣ ಹೊರಟ ಗೂಬೆ ಹೆಸರು ಬ್ರೌನ್ ಹಾಕ್ ಅವುಲ್ ಕನ್ನಡದಲ್ಲಿ ಇದನ್ನು ಕಂದು ಗಿಡುಗ ಗೂಬೆ ಎಂದು ಕರೆಯುತ್ತಾರೆ. ಆತ ನಮ್ಮನ್ನು ಕಾಡ ದಾರಿಯಲ್ಲಿ ಕರೆದುಕೊಂಡು ಹೊರಟ. ಪಕ್ಕದಲ್ಲೇ ಕೇರಳದ ಪ್ರಸಿದ್ಧ ನದಿ ಪೆರಿಯಾರ್ ತಣ್ಣಗೆ ಹರಿಯುತ್ತಿತ್ತು. ಅನೇಕ ಕೀಟಗಳ ಗಾಯನದಿಂದ ಕಾಡು ಆರ್ಕೆಸ್ಟ್ರಾ ವೇದಿಕೆಯಂತೆ ಭಾಸವಾಗುತ್ತಿತ್ತು. ನಡುನಡುವೆ ನತ್ತಿಂಗಗಳ ಕೂಗು ಕೇಳುತ್ತಿತ್ತು. ಒಂದು ಏರುದಾರಿಯ ಹತ್ತಿದ ಆತ ನಮಗೊಂದು ಮರ ತೋರಿಸಿದ. 'ಅದರ ದೊಡ್ಡ ರೆಂಬೆಯ ಆಸುಪಾಸಲ್ಲೇ ಇನ್ನು ಕೆಲವೇ ಕ್ಷಣಗಳಲ್ಲಿ ಗೂಬೆ ಬರುತ್ತದೆ ರೆಡಿಯಾಗಿರಿ' ಎಂದ. 'ನೀವು ಯಾರೂ ನಿಮ್ಮ ಬೆಳಕನ್ನು ಇಲ್ಲಿ ಬಳಸಬಾರದು. ನಾನು ಮಾತ್ರ ಅದರ ಮುಖಕ್ಕೆ ಟಾರ್ಚಿನ ಲೈಟು ಹಾಕುತ್ತೇನೆ. ಟ್ರೈಪ್ಯಾಡಿಗೆ ಕ್ಯಾಮೆರಾಗಳನ್ನು ಗಟ್ಟಿಯಾಗಿ ಜಡಿದುಕೊಂಡು ನಿಲ್ಲುವುದಷ್ಟೇ ನಿಮ್ಮ ಕೆಲಸ' ಎಂದು ಸೈನ್ಯದ ಪರಿಭಾಷೆಯಲ್ಲಿ ಆರ್ಡರ್ ಮಾಡಿದ. ಆಯಿತೆಂದು ತಲೆಹಾಕಿ ಅವನ ಆದೇಶದಂತೆ ಸಿದ್ಧವಾಗಿ ಗೂಬೆಗೆ ಕಾದೆವು.

ತನ್ನ ಮೊಬೈಲ್ ಬಳಸಿ ಗೂಬೆಯ ದನಿಯನ್ನು ಪ್ಲೇ ಮಾಡಿದ. ಕೆಲವೇ ನಿಮಿಷಗಳಲ್ಲಿ ಎಲ್ಲಿತ್ತೋ ಏನೋ? ಗುಮ್ಮ ಪುರ್ರೆಂದು ಹಾರಿ ಬಂದು ಆತ ಹೇಳಿದ ಕೊಂಬೆಯ ಮೇಲೆ ಕೂತೇ ಬಿಟ್ಟಿತು. ಆತ ಬಳಸಿದ ಕೂಗು ಅದರ ಸಂಗಾತಿಯೊಂದು ಸರಸಕ್ಕೆ ಬಾ ಎಂದು ಕರೆದ ಮಧುರ ಧ್ವನಿಯೂ ಆಗಿರಬಹುದು. ಅಥವಾ ಸಮಸ್ಯೆಯಲ್ಲಿರುವ ಅದರದ್ದೇ ಜಾತಿಯ ಪಕ್ಷಿಯ ಸಂಕಟದ ದನಿಯೂ ಆಗಿದ್ದಿರಬಹುದು. ಬಂದ ಉಲೂಕ ಗಾಬರಿಯಲ್ಲಿ ಅತ್ತಿಂದಿತ್ತ ಓಡಾಡಿತು. ತನ್ನದೇ ಪ್ರಜಾತಿಯ ಗೂಬೆ ಎಲ್ಲಿದೆ ಎಂದು ಅದು ತಡಕಾಡಿತು. ನಾವು ಸೊಗಸಾಗಿ ಅದರ ಚಿತ್ರವನ್ನು ಸೆರೆ ಹಿಡಿದೆವು. ದಿನವೂ ಬರುವ ಪ್ರವಾಸಿಗರಿಗೆ ಗೂಗೆಗಳನ್ನು ತೋರಿಸುತ್ತಾ ಇವರು ಪಳಗಿ ಹೋಗಿದ್ದಾರೆ. ನಮಗೆ ಇದೆಲ್ಲಾ ಹೊಸ ಅನುಭವ ಎನಿಸಿದರೆ ಇವರಿಗೆ ಇದೇ ದಿನನಿತ್ಯದ ಕಸುಬು.

ಮಳೆಗಾಲದಲ್ಲಿ ತಮ್ಮ ಸಂತತಿ ವೃದ್ಧಿಸಿಕೊಳ್ಳಲು ಚಡಪಡಿಸುವ ಕಪ್ಪೆಗಳನ್ನೂ, ಆ ಸಮಯದಲ್ಲೇ ಅವುಗಳ ಬೇಟೆಯಾಡಲು ಧಾವಿಸುವ ನಾನಾ ನಮೂನೆಯ ಹಾವುಗಳನ್ನೂ ನಾವು ಚಿತ್ರೀಕರಿಸುವುದು ಇಂತಹ ಕತ್ತಲ ರಾತ್ರಿಗಳಲ್ಲಿಯೆ. ಕತ್ತಲ ಸಮಯದಲ್ಲಿ ಕಣ್ಣಿಗೆ ಕಾಣುವ ಅನೇಕ ಪಕ್ಷಿಗಳು, ಹಾವುಗಳು, ಕೀಟಗಳು, ಕೆಲ ಪ್ರಾಣಿಗಳು ಹಗಲಲ್ಲಿ ಕಾಣುವುದು ವಿರಳ. ಹಾರು ಬೆಕ್ಕು, ಹಾರುವ ಅಳಿಲು ಕೂಡ ರಾತ್ರಿ ಸಮಯದಲ್ಲೇ ಸಿಗುವುದು. ಕಾಡು ಹಗಲಲ್ಲಿ ಎಷ್ಟು ಕ್ರಿಯಾಶೀಲವಾಗಿರುತ್ತದೆಯೋ ರಾತ್ರಿ ಕೂಡ ಅಷ್ಟೇ ಚಟುವಟಿಕೆಯಿಂದ ಇರುತ್ತದೆ. ಮೊದಮೊದಲು ಕಷ್ಟ, ಭಯ ಎನಿಸುತ್ತಿದ್ದ ಈ ತಲಬು ಈಗ ಸಲೀಸು ಎನಿಸತೊಡಗಿದೆ. ●